ಹೊಗಳಿ ಯಾಂತ್ರೀಕರಣ ಹೇಗೆ ಗ್ರಾಮೀಣ ಸಂತಸಗಳನ್ನು ನುಂಗಿಹಾಕುತ್ತಿದೆ ಎಂಬರ್ಥದಲ್ಲಿ ಭಾನುವಾರದ ಪುರವಣಿಯಲ್ಲಿ ಪ್ರಕಟಿಸಿತು. ಶಾಲೆಯ ಮಾಸ್ತರು ಮಕ್ಕಳನ್ನು ಪ್ರವಾಸಕ್ಕೆ ಕರೆತಂದು ಆಲೆಮನೆ ತೋರಿಸಿ ಒಂದು ಕಾಲದವರ ಸಂಭ್ರಮಕ್ಕೆ ಏನೆಲ್ಲ ಕಾರಣವಾಗಿತ್ತು ಅಂತ ವಿವರಿಸಿದರು. ಮಕ್ಕಳೆಲ್ಲ ಹಾಲು ಕುಡಿದು, ಬೆಲ್ಲ ನೆಕ್ಕಿ ವಾಪಸು ಹೋದರು. ಬೆಳಿಗ್ಗೆ ಬೆಳಿಗ್ಗೆ ಸೈಕಲ್ ಹೊಡೆದುಕೊಂಡು ಆರುಮೈಲು ದೂರದ ಹಳ್ಳಿಯಿಂದ ಬಂದವನೊಬ್ಬ ಅಪ್ಪಯ್ಯನಿಗೆ ಜಾಂಡೀಸು, ಶುದ್ಧ ಕಬ್ಬಿನ ಹಾಲು ಕೊಡಿ ಅಂದಿದ್ರು ಡಾಕ್ಟರು ಅಂತೆಲ್ಲ ನಿವೇದಿಸಿ ಸ್ಟೀಲಿನ ಉಗ್ಗದ ತುಂಬ ತುಂಬಿಕೊಟ್ಟು, ದಿನಾ ಬಂದು ತಗೊಂಡುಹೋಗು ಅಂತ ರಾಮಣ್ಣ ಅಂದಿದ್ದಕ್ಕೆ ಖುಷಿಯಿಂದ ಮುಖ ಇಷ್ಟಗಲ ಮಾಡುವುದರ ಮೂಲಕ ಕೃತಜ್ಞನಾದ. ಶಿರಸಿಯ ಕೆಲ ವ್ಯಾಪಾರಸ್ಥರು, ಪರಿಚಯದವರು ರೇಟು ಜಾಸ್ತಿಯಾದ್ರು ಚಿಂತೆಯಿಲ್ಲ ಮುಂಗಡ ಬೇಕಿದ್ರೆ ಕೊಡತೇವೆ ಅಂತ ಕಾಯ್ದಿರಿಸಲು ನೋಡಿದರು. ಸದ್ಯಕ್ಕೆ ಯಾವುದೂ ಮಾರುವುದಿಲ್ಲ ತಮಗೇ ಬೇಕು ಅಂತ ಹೇಳಿಬಿಟ್ಟರು ರಾಮಣ್ಣ. 'ಮಕ್ಕಳಿಗೆ ಇಲ್ಲಿಯ ವಿಷಯ ಹೇಳಿದೆ. ನೀವೂ ಹೇಳಿ. ಸಂತೋಷ ಪಡತಾರೆ' ಅಂತ ಗೌರಕ್ಕ ಹೇಳಿದ್ದಕ್ಕೆ 'ಏ... ಬಿಡೇ, ಕಬ್ಬಿನಹಾಲು ಕುಡಿಯೋದಕ್ಕೆ ವಿಮಾನ ಹತ್ತಿ ಬಂದುಬಿಡತಾರೇನೆ? ಈ ಔಪಚಾರಿಕತೆಯೆಲ್ಲಾ ಯಾಕೆ ಕರ್ಮಕ್ಕೆ; ನಿಂಗೊಂದು ಹುಚ್ಚು' ಅಂದವರು, 'ನೀನು ಹ್ಯಾಗು ಹೇಳಿದಿಯಲ್ಲ ಮತ್ತೆ ನಾನೂ ಅದನ್ನೆ ಹೇಳೋದ್ರಲ್ಲಿ ಏನು ಹೆಚ್ಚುಗಾರಿಕೆ?...' ಅನ್ನುತ್ತ ಕೊಪ್ಪರಿಗೆಯತ್ತ ಹೆಜ್ಜೆ ಹಾಕಿದರು.

ಒಂದುದಿನ ಮೂರುಸಂಜೆಯ ಹೊತ್ತಿಗೆ ನಾಲ್ಕಾರು ಜನ ಬಂದರು. ಪಕ್ಕಕ್ಕೆ ಕರೆದು ತಮಗೆ ಬೆಲ್ಲದ ಕೆಲಸ ಚೆನ್ನಾಗಿ ಗೊತ್ತು, ಬೇಕಿದ್ರೆ ನೀವು ತಯಾರು ಮಾಡೋದನ್ನ ಪೆಂಟೆಬೆಲ್ಲ ಮಾಡೋಣ, ಅಷ್ಟೇ ಅಲ್ಲ ಮಾಮೂಲಿಗಿಂತ ಡಬಲ್ಲು ಮಾಡೋ ಕಲೆ ತಮಗೆ ಗೊತ್ತು, ಲಾಭದಲ್ಲಿ ಪರ್ಸೆಂಟೇಜು ಕೊಡಿ ಅಂತ ಪ್ರಸ್ತಾಪವಿಟ್ಟರು. ಅವರಾಡುವ ಭಾಷೆಯಿಂದ ಈ ಕಡೆಯವರಂತೆ ಕಾಣಲಿಲ್ಲ. ತಾನಿದನ್ನ ಮಾರಲಿಕ್ಕಂತ ಮಾಡತಾನೇ ಇಲ್ಲ. ಅಂದಮೇಲೆ ಲಾಭ, ಕಮಿಷನ್ನು ಎಲ್ಬಂತು? ದೂಸರಾ ಮಾತೇ ಬೇಡ ಅಂತ ಖಡಾಖಂಡಿತ ಮಾತು ಮುಗಿಸಿ ಕಳಿಸಿದರು. ಅಮೃತಕ್ಕೆ ವಿಷ ಸೇರಸೋ ಮಾತಾಡತಾರಲ್ಲೋ ಮುತ್ತಾಚಾರಿ ಇವರು, ಅಂತ ಬೇಸರದಿಂದ ಹೇಳಿದ್ದಕ್ಕೆ ಅಮೃತ ಹುಟ್ಟಿದಲ್ಲೆ ವಿಷವೂ ಹುಟ್ಟಿದ್ದಲ್ಲವ ಅಂತ ಅಭಿಪ್ರಾಯ ಹೇಳಿದವಗೆ ತಾಳಮದ್ದಲೆ ಪ್ರಸಂಗದ ಪದ್ಯ ನೆನಪಾಗಿ ಗುನುಗತೊಡಗಿದ. ರಾಮಣ್ಣನೂ ತಾಳಮದ್ದಲೆ ಪ್ರಿಯರೆ. ಅದೇ ನಾಂದಿಯಾದಂತೆ ರಾತ್ರಿ ಚಪ್ಪರದಲ್ಲಿ ರಾಮ ವಾಲಿಯ ಪ್ರಸಂಗವನ್ನೆತ್ತಿಕೊಂಡು ಇಬ್ಬರೂ ತನ್ಮಯರಾದರು. ಎರಡು ದಿನವಾಗುವಾಗ ಶಾಲೆಯ ಕಾಂತಾ ಮಾಸ್ತರು ಮೃದಂಗದೊಂದಿಗೆ ಸ್ವಯಂಪ್ರೇರಿತರಾಗಿ ಹಾಜರಾದರು. ಮೃದಂಗದ ಸ್ವರದ ಮೇಲೆ ಸವಾರಿ ಮಾಡುತ್ತ '...ಅವನಿಸುತೆ ಕೇಳೆನ್ನ ಬಿನ್ನಹವ...' ಮುಂತಾದ ಹಾಡುಗಳು ಮರಮಟ್ಟುಗಳಲ್ಲಿ ಮಲಗಿದ ಹಕ್ಕಿಗಳನ್ನು ತಲುಪತೊಡಗಿದವು. ಹೀಗೆ ಗತಿಯನ್ನು ಕಳೆದುಕೊಳ್ಳದೆ ಒಂದೇ ಸಹನೆಯಲ್ಲಿ ಹದಿನೈದು ದಿನ ನಡೆಯುತ್ತಾ ಬಂದ, ಹಗಲಿನದೆಲ್ಲ ಧರ್ಮಾರ್ಥ ಕುಡಿದು ತಿನ್ನುವುದಕ್ಕೇ ಮುಗಿಯುವ ಕಬ್ಬು, ಆರ್ಥಿಕವಾಗಿ ಲಾಭವಿಲ್ಲ ಅನ್ನುವದನ್ನು ಒತ್ತಟ್ಟಿಗಿಟ್ಟುಕೊಂಡರೂ, ರಾಮಣ್ಣನವರದು ದಡ್ಡತನದ ಕೆಲಸ ಎಂಬ ಅಭಿಪ್ರಾಯ ನಶಿಸಿಹೋಗಿ ಜನ ಅಲ್ಲೊಂದು ಪಾರಮಾರ್ಥಿಕವಾದ ಜೀವನಮುಖಿ ಸಂಕಲ್ಪವನ್ನು ಕಾಣತೊಡಗಿದರು. ಕೆಲವರು ಮನೆಯಿಂದ ಬರುವಾಗ ಮಂಡಕ್ಕಿಗೆ ಈರುಳ್ಳಿ ಹೆಚ್ಚಿಹಾಕಿ, ಕೊತ್ತಂಬರಿ ಸೊಪ್ಪು, ಹಸಿಮೆಣಸಿನಕಾಯಿ ಬೆರೆಸಿ, ಕಬ್ಬಿನ ಹಾಲು ಕುಡಿಯುವಾಗ ನಾಲಗೆಗೆ